





# ಕೂದಲೆಳೆ ಕೀಟಗಳು!

ಕೂದಲು ಅದೆಷ್ಟು ನವಿರಾದ ವಸ್ತು! ಇಂತಹ ಕೂದಲೆಳೆಗಳನ್ನು ಕೂಡಿಸಿಕೊಂಡು ಯಾವುದೇ ತರಹದ ಕಲಾಕೃತಿಗಳನ್ನು ಮಾಡಲು ಸಾಧ್ಯವೇ? ಸಾಮಾನ್ಯ ಕಲಾವಿದರಿಗಂತೂ ಅಸಾಧ್ಯದ ಮಾತು. ಆದರೆ ಸಿಯಾಟೆಲ್‌ನ ಅನ್ರಿಯನ್ನೆ ಆನ್ಸ್ಟನ್ಸನ್ ಎಂಬ ಅಪ್ರತಿಮ ಕಲಾವಿದೆ ಕೂದಲೆಳೆಗಳಿಂದ, ಅತ್ಯಂತ ಸಹಜ ರೂಪದಲ್ಲಿ ಕೀಟಗಳನ್ನು ಮರು ಸೃಷ್ಟಿಸಿದ್ದಾಳೆ!

ಈ ಕೀಟಗಳ ಇನ್ನೊಂದು ವಿಶೇಷತೆ ಏನೆಂದರೆ ಇವುಗಳನ್ನು ಮಾಡಲು ಈಕೆ ಕೇವಲ ತನ್ನ ಹಾಗೂ ತನ್ನ ಆಪ್ತ ಬಂಧು ಮಿತ್ರರ ಕೂದಲನ್ನು ಮಾತ್ರ ಬಳಸಿದ್ದಾಳಂತೆ. ಬರಿಗಣ್ಣಿಗೆ ಕೇವಲ ಕೀಟಗಳಷ್ಟೇ ಎಂದೆನಿಸಿದರೂ ಭೂತಗನ್ನಡಿಯಿಂದ ವೀಕ್ಷಿಸಿದಾಗ ಪ್ರತಿಯೊಂದು ಕೀಟ ತಯಾರಿಕೆಯಲ್ಲೂ ಆಕೆ ಎಷ್ಟು ಸೂಕ್ಷ್ಮವಾಗಿ ಸಂಕೀರ್ಣತೆಯ ಕೆಲಸ ಮಾಡಿದ್ದಾಳೆ ಎನ್ನುವ ಅರಿವಾಗುತ್ತದೆ. ಇವುಗಳೆಲ್ಲ ಆಕೆಯ ಕಲ್ಪನೆಯಲ್ಲಿ ತಯಾರಾಗಿದ್ದರೂ, ಇನ್ನೇನು ಹಾರಲು ಸಿದ್ಧವಾಗಿವೆಯೇನೋ ಎನ್ನುವಂತೆ ಕೆಲವು ನೈಜವಾಗಿವೆ!

■ ವಿದ್ಯಾ ಹಾಲಭಾವಿ



